**ಮುಖ್ಯ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ, ಹಾವೇರಿ.**

**ಸಿ.ಸಿ.ನಂ.448/2018**

| | | | |
|---|---|---|---|
| ಸಾಕ್ಷಿದಾರರ ಹೆಸರು | ಪಾಂಡಪ್ಪ ಹಡಪದ | ಸಿಡಬ್ಲ್ಯೂ | 22 |
| ತಂದೆಯ ಹೆಸರು | ಬಸವಂತಪ್ಪ | ಪಿಡಬ್ಲ್ಯೂ | 12 |
| ವಯಸ್ಸು | 69 ವರ್ಷ | | |
| ಉದ್ಯೋಗ | ನಿವೃತ್ತ ಪಿ.ಎಸ್.ಐ | | |
| ವಾಸಸ್ಥಳ | ಹುಬ್ಬಳ್ಳಿ | | |

**ದಿಃ11.03.2026 ರಂದು ಸಾಕ್ಷಿದಾರರಿಗೆ ಪ್ರಮಾಣ ವಚನ ಬೋಧಿಸಲಾಯಿತು.**

**ಮುಖ್ಯ ವಿಚಾರಣೆಃ ಹಿ.ಸ.ಸ.ಅಭಿಯೋಜಕರಿಂದ.**

1) ನಾನು ದಿನಾಂಕಃ 27.09.2016 ರಿಂದ ದಿನಾಂಕಃ 20.09.2017 ರವರೆಗೆ ಹಾವೇರಿ ಶಹರ ಪೊಲೀಸ ಠಾಣೆಯಲ್ಲಿ ಪಿ.ಎಸ್.ಐ ಆಗಿ ಸೇವೆ ಸಲ್ಲಿಸಿದ್ದೇನೆ. ದಿನಾಂಕಃ 04.11.2016 ರಂದು ಸಾಯಂಕಾಲ 5-10 ಘಂಟೆಗೆ ನಾನು ಠಾಣಾ ಪ್ರಭಾರದಲ್ಲಿದಾಗ ಚಾ.ಸಾ-1 ಇವರು ಕೊಟ್ಟಂತಹ ಗಣಕೀಕೃತ ಪಿರ್ಯಾದಿಯ ಆಧಾರದ ಮೇಲೆ ಹಾವೇರಿ ಶಹರ ಪೊಲೀಸ ಠಾಣೆ ಗುನ್ನಾ ನಂಬರಃ 215/2016 ರಡಿಯಲ್ಲಿ ಪ್ರಕರಣವನ್ನು ದಾಖಲಿಸಿ ನಂತರ ಪ್ರ.ವ.ವರದಿಯನ್ನು ತಯಾರಿಸಿ ನ್ಯಾಯಾಲಯಕ್ಕೆ ಹಾಗೂ ಮೇಲಾಧಿಕಾರಿಗಳಿಗೆ ಸಲ್ಲಿಸಿದ್ದೇನೆ.

2) ದಿನಾಂಕಃ 05.11.2016 ರಂದು ಕೃತ್ಯ ನಡೆದ ಸ್ಥಳಕ್ಕೆ ಪಂಚರ ಸಮಕ್ಷಮ ಚಾ.ಸಾ-2 ಮತ್ತು 3 ಇವರ ಸಮಕ್ಷಮ ಮದ್ಯಾಹ್ನ 12-00 ಘಂಟೆಯಿಂದ 12-45 ರವರೆಗೆ ಘಟನಾ ಸ್ಥಳದ ಪಂಚನಾಮೆಯನ್ನು ಮಾಡಿದ್ದೇನೆ. ಚಾ.ಸಾ-6 ಇವರಿಗೆ ಈ ಪ್ರಕರಣದ ಕುರಿತಾಗಿ

ದಾಖಲಾತಿಗಳನ್ನು ಹಾಜರುಪಡಿಸುವಂತೆ ನೋಟಿಸನ್ನು ಕೊಟ್ಟಿದ್ದೇನೆ. ಚಾ.ಸಾ-6 ಮತ್ತು 7 ಇವರ ಹೇಳಿಕೆಗಳನ್ನು ಸಹ ದಾಖಲಿಸಿಕೊಂಡಿದ್ದೇನೆ. ಈ ಪ್ರಕರಣದಲ್ಲಿ ಆರೋಪಿಗಳು ಒಂದು ಆಧಾರಕಾರ್ಡನ್ನು ಬಳಸಿ 72 ಕೂಪನಗಳನ್ನು ಖೊಟ್ಟಿಯಾಗಿ ಸೃಷ್ಟಿಸಿ ಸರ್ಕಾರಕ್ಕೆ ತುಂಬಬೇಕಾದ ರೂ.1,10,808/- ಗಳಷ್ಟು ನಷ್ಟವನ್ನುಂಟು ಮಾಡಿ ಮೋಸ ಮಾಡಿರುತ್ತಾರೆ.

**3)** ದಿನಾಂಕಃ 13.12.2016 ರಂದು ಚಾ.ಸಾ-8 ರವರ ಹೇಳಿಕೆಯನ್ನು ಪಡೆದುಕೊಂಡಿದ್ದೇನೆ. ದಿನಾಂಕಃ 19.12.2016 ರಂದು ಚಾ.ಸಾ-9,11,13 ರಿಂದ 18 ವರ ಹೇಳಿಕೆಗಳನ್ನು ಪಡೆದುಕೊಂಡಿದ್ದೇನೆ. ದಿನಾಂಕಃ 20.12.2016 ರಂದು ಚಾ.ಸಾ-10,12,19 ರಿಂದ 21 ರವರ ಹೇಳಿಕೆಗಳನ್ನು ಪಡೆದಿದ್ದೇನೆ. ಪ್ರಕರಣದ ಕಡತವನ್ನು ಮುಂದಿನ ತನಿಖೆಗಾಗಿ ಚಾ.ಸಾ-24 ಇವರಿಗೆ ವಹಿಸಿಕೊಟ್ಟಿದ್ದೇನೆ.

**4)** ನಾನು ಈ ಪ್ರಕರಣದಲ್ಲಿ ಸ್ವೀಕರಿಸಿದ ಗಣಕೀಕೃತ ಪಿರ್ಯಾದಿಯನ್ನು ಈಗಾಗಲೇ ನಿ.ಪಿ-3 ಎಂದು ಗುರುತಿಸಲಾಗಿದ್ದು, ಸಾಕ್ಷಿಯ ಸಹಿಯನ್ನು ನಿ.ಪಿ-3(ಬಿ) ಎಂದು ಗುರುತಿಸಲಾಯಿತು. ಪ್ರ.ವ.ವರದಿಯನ್ನು ನಿ.ಪಿ-10 ಎಂದು, ಸಾಕ್ಷಿಯ ಸಹಿಯನ್ನು ನಿ.ಪಿ-10(ಎ) ಎಂದು ಗುರುತಿಸಲಾಯಿತು. ಘಟನಾ ಸ್ಥಳದ ಪಂಚನಾಮೆಯನ್ನು ಈಗಾಗಲೇ ನಿ.ಪಿ-4 ಎಂದು ಗುರುತಿಸಲಾಗಿದ್ದು, ಸಾಕ್ಷಿಯ ಸಹಿಯನ್ನು ನಿ.ಪಿ-4(ಸಿ) ಎಂದು ಗುರುತಿಸಲಾಯಿತು. ಚಾ.ಸಾ-6 ಇವರಿಗೆ ಕೊಟ್ಟಂತಹ ನೋಟಿಸಿನ ಪ್ರತಿಯನ್ನು ನಿ.ಪಿ-11 ಎಂದು, ಸಾಕ್ಷಿಯ ಸಹಿಯನ್ನು ನಿ.ಪಿ-11(ಎ) ಎಂದು ಗುರುತಿಸಲಾಯಿತು. ನಾನು ಆರೋಪಿಗಳನ್ನು ದಸ್ತಗಿರಿ ಮಾಡಿರುವದಿಲ್ಲ. ನನ್ನ ಮುಂದೆ ಚಾ.ಸಾ-9,14,15,19 ಮತ್ತು 21 ಇವರು ನಿ.ಪಿ-5 ರಿಂದ 9 ರಂತೆ ಹೇಳಿಕೆಗಳನ್ನು ಕೊಟ್ಟಿರುತ್ತಾರೆ.

**<u>ಪಾಟೀ ಸವಾಲುಃ ಶ್ರೀ ಸಿ.ಹೆಚ್.ಜಿ ವಕೀಲರಿಂದಃ 2 ನೇ ಆರೋಪಿ ಪರವಾಗಿಃ</u>**

4) ಪಿರ್ಯಾದಿದಾರರು ಪಿರ್ಯಾದಿಯನ್ನು ತಮ್ಮ ಪಿರ್ಯಾದಿಯಲ್ಲಿ ಯಾವ ಕಾರಣಕ್ಕಾಗಿ ಅದನ್ನು ತಡವಾಗಿ ಕೊಟ್ಟಿರುತ್ತಾರೆ ಎಂದು ನಾನು ಅದರ ಬಗ್ಗೆ ವಿಚಾರಣೆ ಮಾಡಿ ಪ್ರ.ವ.ವರದಿಯಲ್ಲಿ ಕಾಣಿಸಿಲ್ಲ ಅಂದರೆ ಸರಿ. ಪಿರ್ಯಾದಿ ನನ್ನ ಸಮಕ್ಷಮ ಹಾಜರಾಗಿ ಯಾವುದೇ ಪಿರ್ಯಾದಿ ಕೊಟ್ಟಿಲ್ಲ ಅಂದರೆ ಸರಿಯಲ್ಲ. ನಾನು ಚಾ.ಸಾ-6 ಇವರಿಗೆ ಈ ಪ್ರಕರಣದ ಕುರಿತಾಗಿ ದಾಖಲಾತಿಗಳನ್ನು ಹಾಜರುಪಡಿಸಲು ಯಾವುದೇ ನೋಟಿಸನ್ನು ಕೊಟ್ಟಿಲ್ಲ ಅಂದರೆ ಸರಿಯಲ್ಲ. ಅದೇ ರೀತಿ ಈ ಪ್ರಕರಣದ ಆರೋಪಿಗಳು ಸರ್ಕಾರದಿಂದ ಸಿಗುವ ಕೂಪನಗಳನ್ನು ದುರುಪಯೋಗಪಡಿಸಿಕೊಂಡು ಅದರ ಮೇಲೇ ಸರ್ಕಾರಕ್ಕೆ ಕಟ್ಟಬೇಕಾರದ ರೂ.1,10,808/- ಗಳಷ್ಟು ನಷ್ಟವನ್ನುಂಟು ಮಾಡಿರುತ್ತಾರೆ ಎಂದು ಸರ್ಕಾರಕ್ಕೆ ಮೋಸ ಮಾಡಿರುತ್ತಾರೆ ಎಂದು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಅಂದರೆ ಸರಿಯಲ್ಲ. ನಾನು ಈ ಪ್ರಕರಣದಲ್ಲಿ ಯಾವುದೇ ಸಾಕ್ಷಿದಾರರ ಹೇಳಿಕೆ ಪಡೆದಿಲ್ಲ ಅಂದರೆ ಸರಿಯಲ್ಲ. ನಾನು ಹಾಜರುಪಡಿಸಿದ ಎಲ್ಲ ಹೇಳಿಕೆಗಳನ್ನು ಪ್ರಕರಣಕ್ಕೆ ಪೂರಕವಾಗುವಂತೆ ತಯಾರಿಸಿ ಹಾಜರುಪಡಿಸಲಾಗಿದೆ ಅಂದರೆ ಸರಿಯಲ್ಲ.

**<u>ಮರು ವಿಚಾರಣೆ ಇಲ್ಲಾ.</u>**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು)

ನ. ಸ. ಓ. ಹೇ. ಕೇ. ಸರಿ ಇದೆ.
ಎಂದು ಒಪ್ಪಿರುತ್ತಾರೆ.

ಮುಖ್ಯ ನ್ಯಾಯಿಕ ದಂಡಾಧಿಕಾರಿಗಳು
ಹಾವೇರಿ.